# All India Radio: Bangalore
# National Bulletin In Kannada
# 23.04.2026  19.35 p.m.
# ಆಕಾಶವಾಣಿ, ಬೆಂಗಳೂರು
# ರಾಷ್ಟ್ರೀಯ ವಾರ್ತೆಗಳು
# 23.04.2026  19.35 p.m.

****************

ಮುಖ್ಯಾಂಶಗಳು

೧.  ವಿಧಾನಸಭೆ ಚುನಾವಣೆ; ಪ್ರಾಥಮಿಕ ವರದಿಯಂತೆ ಪಶ್ಚಿಮ ಬಂಗಾಳದ ಮೊದಲ ಹಂತದಲ್ಲಿ ಶೇಕಡ ೯೧.೫೨ , ತಮಿಳುನಾಡಿನಲ್ಲಿ ೮೪.೪೫ ರಷ್ಟು ಮತದಾನ

೨.  ಪಶ್ಚಿಮ ಬಂಗಾಳ ಎರಡನೇ ಹಂತದ ಚುನಾವಣೆ; ರಾಜಕೀಯ ಪಕ್ಷಗಳಿಂದ ಬಿರುಸಿನ ಪ್ರಚಾರ

೩.  ಭಾರತದೊಂದಿಗೆ ಸಹ ಅಭಿವೃದ್ಧಿ-ಉತ್ಪಾದನೆ ಕೈಗೊಳ್ಳಲು ಜರ್ಮನ್ ಉದ್ಯಮಗಳಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕರೆ

೪.  ಮುಂದಿನ ತಿಂಗಳ ೨೮ ರಿಂದ ದೆಹಲಿಯಲ್ಲಿ ಭಾರತ-ಆಫ್ರಿಕಾ ವೇದಿಕೆ ಶೃಂಗಸಭೆ

೫.  ಐಪಿಎಲ್ ಟಿ-೨೦ ಕ್ರಿಕೆಟ್: ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ತಂಡ ಫೀಲ್ಡಿಂಗ್ ಆಯ್ಕೆ

****************

ಪಶ್ಚಿಮಬಂಗಾಳದ ಮೊದಲ ಹಂತ ಹಾಗೂ ತಮಿಳುನಾಡು ವಿಧಾನಸಭೆಗೆ ಇಂದು ನಡೆದ ಚುನಾವಣೆಯಲ್ಲಿ ಪ್ರಾಥಮಿಕ ವರದಿ ಪ್ರಕಾರ ತಮಿಳುನಾಡಿನಲ್ಲಿ ಶೇಕಡ ೮೪.೪೫ ರಷ್ಟು ಮತದಾನವಾಗಿದೆ. ತಮಿಳುನಾಡಿನ ೩೮ ಜಿಲ್ಲೆಗಳ ಪೈಕಿ ೩೦ ಜಿಲ್ಲೆಗಳಲ್ಲಿ ಶೇಕಡ ೮೦ಕ್ಕೂ ಹೆಚ್ಚು ಮತದಾನವಾಗಿದೆ. ಪಶ್ಚಿಮದ ಜಿಲ್ಲೆಗಳು ಅತ್ಯಧಿಕ ಪ್ರಮಾಣದ ಮತದಾನ ದಾಖಲಿಸಿದೆ. ಕರೂರಿನಲ್ಲಿ ಗರಿಷ್ಠ ಶೇಕಡ ೮೯ರಷ್ಟು ಮತದಾನವಾಗಿದೆ.

ಪಶ್ಚಿಮಬಂಗಾಳದ ಮೊದಲ ಹಂತದ ಮತದಾನದಲ್ಲಿ ಶೇಕಡ ೯೧.೫೨ ರಷ್ಟು ಮತದಾನವಾಗಿದೆ. ಕೆಲವು ಘಟನೆಗಳನ್ನು ಹೊರತುಪಡಿಸಿ ಮತದಾನ ಒಟ್ಟಾರೆಯಾಗಿ ಶಾಂತಿಯುತವಾಗಿತ್ತು ಎಂದು ವರದಿಯಾಗಿದೆ.

****************

ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಪಶ್ಚಿಮ ಬಂಗಾಳದ ವಿಧಾನಸಭಾ ಕ್ಷೇತ್ರಗಳಲ್ಲಿ ವಿವಿಧ ರಾಜಕೀಯ ಪಕ್ಷಗಳಿಂದ ಭರದ ಚುನಾವಣಾ ಪ್ರಚಾರ ನಡೆದಿದೆ.

ಹಿರಿಯ ಬಿಜೆಪಿ ನಾಯಕ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು, ಕೃಷ್ಣ ನಗರದಲ್ಲಿಂದು ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿ, ರಾಜ್ಯದಲ್ಲಿ ರಾಜಕೀಯ ಬದಲಾವಣೆ ಅನಿವಾರ್ಯವಾಗಿದೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರ ಅಕ್ರಮ ನುಸುಳುಕೋರರನ್ನು ಪ್ರೋತ್ಸಾಹಿಸುತ್ತಿದೆ; ಮಿಥ್ಯ ದಾಖಲೆಗಳನ್ನು ಒದಗಿಸುವ ಮೂಲಕ ಈ ನುಸುಳುಕೋರರಿಗೆ ಆಶ್ರಯ ನೀಡುತ್ತಿದೆ ಎಂದು ಆಪಾದಿಸಿದರು.

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಅನುಮೋದನೆಗೆ ತೃಣಮೂಲ ಕಾಂಗ್ರೆಸ್ ತಡೆಯೊಡ್ಡಿದೆ ಎಂದು ಪ್ರಧಾನಿ ಅವರು ಟೀಕಿಸಿದರು. ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದರೆ, ಪೌರತ್ವ ತಿದ್ದುಪಡಿ ಕಾಯ್ದೆ ಅನ್ವಯ ಪೌರತ್ವ ನೀಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲಾಗುವುದು ಎಂದರು.

ನಂತರ ಪ್ರಧಾನಿ ಅವರು, ಮಾತುರ್‌ಪುರದಲ್ಲಿ ಚುನಾವಣಾ ಪ್ರಚಾರ ಸಭೆ ಹಾಗೂ ಹೌರಾದಲ್ಲಿ ರೋಡ್ ಶೋ ನಡೆಸಿದರು.

ಮತ್ತೊಬ್ಬ ಬಿಜೆಪಿ ನಾಯಕ ಅಮಿತ್ ಶಾ, ಹೂಗ್ಲಿಯಲ್ಲಿದ್ದು ಬಾಲಾಗರ್ ಪರ್ಸುರಾಹಗಳಲ್ಲಿ ಸಾರ್ವಜನಿಕ ಸಭೆ ನಡೆಸಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವಿನ್ ನೇತೃತ್ವದಲ್ಲಿ ಖರ್ದ್ ಮತ್ತು ಕಾಶಿಯಾಪುರ-ಬೆಲಗಾಚೆಯದಲ್ಲಿ ರೋಡ್ ಶೋ ನಡೆಯಿತು.

ಈ ಮಧ್ಯೆ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಚೌರಂಗಿ ಮತ್ತು ಜಾಧವ್‌ಪುರಗಳಲ್ಲಿ ಪಕ್ಷದ ಪರ ಚುನಾವಣಾ ಪ್ರಚಾರ ನಡೆಸಿದರು. ತೃಣಮೂಲ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮೆಟಿಯಾಬ್ರುಜ್‌ನಲ್ಲಿ ಮತಯಾಚಿಸಿದರು.

ಸಿಪಿಐಎಂ ರಾಜ್ಯ ಕಾರ್ಯದರ್ಶಿ ಮೊಹಮ್ಮದ್ ಸಲೀಂ ಬ್ಯಾಲಿಗಂಜ್‌ನಲ್ಲಿ ರೋಡ್ ಶೋ ನಡೆಸಿದರು. ಪೊನ್ನಾಗರ್‌ನಿಂದ ಉತ್ತರಾಪರವರೆಗೆ ಮೆರವಣಿಗೆ ನಡೆಸಿ ಮತಯಾಚಿಸಿದರು. ಎಂ.ಎ.ಬೇಬಿ ಮತ್ತು ಬೃಂದಾಕಾರಟ್ ಸೇರಿದಂತೆ ಹಿರಿಯ ಧುರೀಣರು ಜಾಧವ್‌ಪುರದಲ್ಲಿ ರ‍್ಯಾಲಿಯಲ್ಲಿ ಪಾಲ್ಗೊಂಡರು.

ಕಾಂಗ್ರೆಸ್, ಐಎಸ್‌ಎಫ್ ಹಾಗೂ ಇತರ ಪಕ್ಷಗಳ ಧುರೀಣರು ಕೂಡ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಮತಯಾಚನೆ ಮುಂದುವರೆಸಿದ್ದಾರೆ.

****************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿಂದು ಸಾಂಪ್ರದಾಯಿಕ ಕಲಾವಿದರನ್ನು ಭೇಟಿ ಮಾಡಿ, ಕರಕುಶಲ ವಸ್ತುಗಳನ್ನು ವೀಕ್ಷಿಸಿದರು.

ಕಾವಿ, ನಿರ್ಮಲ್, ಮಾತಾ ನಿ ಪಚೇಡಿ ಮತ್ತು ಗೊಂಡಾ ಕುಶಲಕರ್ಮಿಗಳು ಕಲಾವಿದರ ನಿವಾಸ ಯೋಜನೆಯಡಿ ರಾಷ್ಟ್ರಪತಿ ಭವನದಲ್ಲಿದ್ದು, ಕಲಾ ಪ್ರದರ್ಶನ ನಡೆಸುತ್ತಿದ್ದಾರೆ.

ದೇಶದ ಸಾಂಸ್ಕೃತಿಕ ಅಸ್ಮಿತೆಯನ್ನು ಕಾಪಾಡುವ ಭವಿಷ್ಯದ ಜನಾಂಗವನ್ನು ಪ್ರೇರೇಪಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

****************

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷನ್ ಸಮ್ಮುಖದಲ್ಲಿ ಇಂದು ಹೃಷಿಕೇಶ್‌ನ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆರನೇ ಘಟಿಕೋತ್ಸವ ನಡೆಯಿತು.

ವಿವಿಧ ವಿಭಾಗಗಳಲ್ಲಿ ಉತ್ತೀರ್ಣರಾದ ೩೮೬ ವಿದ್ಯಾರ್ಥಿಗಳಿಗೆ ಸಮಾರಂಭದಲ್ಲಿ ಪದವಿ ಪ್ರದಾನ ಮಾಡಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಒಟ್ಟು ೧೩ ಚಿನ್ನ, ೫ ರಜತ ಮತ್ತು ೫ ಕಂಚಿನ ಪದಕಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎಮ್ಸ್‌ನ ಕಾರ್ಯಕಾರಿ ನಿರ್ದೇಶಕಿ, ಪ್ರೊಫೆಸರ್ ಮೀನೂ ಸಿಂಗ್, ಘಟಿಕೋತ್ಸವ, ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಮಾತ್ರವಾಗಿರದೆ, ದೇಶಕ್ಕಾಗಿ ಸಮರ್ಥ ಆರೋಗ್ಯ ವೃತ್ತಿ ಪರರನ್ನು ನೀಡುವ ಎಮ್ಸ್‌ನ ಬದ್ಧತೆಯ ಪ್ರತೀಕವಾಗಿದೆ ಎಂದರು.

ಸಮಾರಂಭದಲ್ಲಿ ರಾಜ್ಯಪಾಲ ಗುರುಮಿತ್ ಸಿಂಗ್, ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವೆ ಅನುಪ್ರಿಯ ಪಟೇಲ್ ಉಪಸ್ಥಿತರಿದ್ದರು.

***************

ಭಾರತ ಕಳೆದ ೧೦ ವರ್ಷಗಳಲ್ಲಿ ಸುಗಮ ವ್ಯಾಪಾರಕ್ಕಾಗಿ ಅನೇಕ ವಿನ್ಯಾಸಾತ್ಮಕ ಸುಧಾರಣೆಗಳನ್ನು ಕೈಗೊಂಡಿದ್ದು, ಬಂಡವಾಳ ಹೂಡಿಕೆಯ ಆಕರ್ಷಕ ತಾಣವನ್ನಾಗಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಅವರು ಜರ್ಮನಿಯ ಮ್ಯೂನಿಕ್‌ನಲ್ಲಿಂದು ರಕ್ಷಣಾ ಹೂಡಿಕೆದಾರರ ಶೃಂಗಸಭೆಯಲ್ಲಿ ಭಾರತೀಯ ಮತ್ತು ಜರ್ಮನಿಯ ರಕ್ಷಣಾ ಉದ್ದಿಮೆದಾರರನ್ನು ಉದ್ದೇಶಿಸಿ ಮಾತನಾಡಿದರು.

ವಿಶೇಷವಾಗಿ ಅಗತ್ಯ ಮತ್ತು ಪ್ರಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಭಾರತದೊಂದಿಗೆ ಸಹ ಅಭಿವೃದ್ಧಿ ಮತ್ತು ಸಹ ಉತ್ಪಾದನೆಗೆ ಮುಂದಾಗುವಂತೆ ಜರ್ಮನಿಯ ಉದ್ದಿಮೆದಾರರನ್ನು ಸಚಿವ ರಾಜನಾಥ್ ಸಿಂಗ್ ಆಹ್ವಾನಿಸಿದರು.

ಆಧುನಿಕ ರಡಾರ್, ಸಂವೇದಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಅಂತರ್ಜಲ ಟ್ರಾನ್ಸ್‌ಮೀಟರ್ ಮೊದಲದ ವಲಯಗಳಲ್ಲಿ ಜರ್ಮನಿಯ ಕಂಪನಿಗಳೊಂದಿಗೆ ಸಹಭಾಗಿತ್ವ ಹೊಂದಲು ಭಾರತೀಯ ಕಂಪನಿಗಳು ಉತ್ಸುಕವಾಗಿವೆ ಎಂದು ಹೇಳಿದರು.

ಭಾರತ ತ್ವರಿತ ವೇಗದಲ್ಲಿ ಬೆಳೆಯುತ್ತಿರುವ ಹಾಗೂ ಸ್ಥಿರ ಆರ್ಥಿಕತೆ ಹೊಂದಿರುವ ದೇಶವಾಗಿದ್ದು, ಬಲವಾದ ಸ್ಥೂಲ ಆರ್ಥಿಕ ಅಡಿಪಾಯ ಹಾಗೂ ಸ್ಪಷ್ಟ ನೀತಿ ಹೊಂದಿದೆ ಎಂದರು.

***************

ವಿಶ್ವ ಭೌಗೋಳಿಕ, ರಾಜಕೀಯ ಸವಾಲುಗಳ ಸಂಕೀರ್ಣ ಕಾಲಘಟ್ಟದಲ್ಲಿರುವಾಗ ಭಾರತ-ಆಫ್ರಿಕಾ ಸಹಭಾಗಿತ್ವ ಗಣನೀಯ ಸ್ಥಾನ ಪಡೆದುಕೊಂಡಿದೆ ಎಂದು ವಿದೇಶಾಂಗ ವ್ಯವಹಾರ ಖಾತೆ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ.

ಅವರು ನವದೆಹಲಿಯಲ್ಲಿಂದು ಭಾರತ-ಆಫ್ರಿಕಾ ವೇದಿಕೆಯ ಶೃಂಗಸಭೆ ಜಾಲತಾಣ ಹಾಗೂ ಲಾಂಛನ ಅನಾವರಣಗೊಳಿಸಿ ಮಾತನಾಡಿ, ಭಾರತದ ವಿದೇಶಾಂಗ ನೀತಿಯಲ್ಲಿ ಆಫ್ರಿಕಾ ಕೇಂದ್ರೀಯ ಸ್ಥಾನವನ್ನು ಪಡೆದುಕೊಂಡಿದೆ. ಹಾಗೂ ಇತ್ತೀಚಿನ ವರ್ಷದಲ್ಲಿ ಆಫ್ರಿಕಾದಲ್ಲಿ ಭಾರತದ ಛಾಪು ವಿಸ್ತೃತಗೊಂಡಿದೆ ಎಂದರು.

ಈ ವೇದಿಕೆಯಡಿ ಖಂಡಾದ್ಯಂತ ೧೭ ಹೊಸ ರಾಜತಾಂತ್ರಿಕ ಮಿಷನ್‌ಗಳನ್ನು ತೆರೆಯಲಾಗಿದೆ. ಈ ಮೂಲಕ ಒಟ್ಟು ಮಿಷನ್‌ಗಳ ಸಂಖ್ಯೆ ೪೬ಕ್ಕೆ ಏರಿಕೆಯಾಗಿದೆ. ಇದು ಭಾರತ - ಆಫ್ರಿಕಾ ನಡುವಿನ ದೀರ್ಘಾವಧಿ ಬದ್ಧತೆಯ ದ್ಯೋತಕವಾಗಿದೆ ಎಂದರು.

ಭಾರತ - ಆಫ್ರಿಕಾ ವೇದಿಕೆ ಶೃಂಗಸಭೆ ಮುಂದಿನ ತಿಂಗಳು ೨೮ ರಿಂದ ೩೧ರವರೆಗೆ ನವದೆಹಲಿಯಲ್ಲಿ ನಡೆಯಲಿದೆ.

***************

ಫ್ರಾನ್ಸ್‌ನ ವಿಮಾನ ನಿಲ್ದಾಣಗಳ ಮೂಲಕ ಸಂಚರಿಸುವ ಭಾರತೀಯರಿಗೆ ವೀಸಾ ಮುಕ್ತ ಟ್ರಾನ್ಸಿಟ್ ನಿಲುಗಡೆಗೆ ಅವಕಾಶ ಕಲ್ಪಿಸಿರುವುದನ್ನು ಭಾರತ ಸ್ವಾಗತಿಸಿದೆ.

ವಿದೇಶಾಂಗ ವ್ಯವಹಾರ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ನವದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಕುರಿತಂತೆ ಈ ವರ್ಷದ ಫೆಬ್ರವರಿಯಲ್ಲಿ ಫ್ರಾನ್ಸ್ ಅಧ್ಯಕ್ಷ ಇಮಾನ್ಯೂಯಲ್ ಮ್ಯಾಕ್ರಾನ್ ಭಾರತಕ್ಕೆ ಭೇಟಿ ನೀಡಿದಾಗ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಒಪ್ಪಂದ ಉಂಟಾಗಿತ್ತು ಇದರಿಂದಾಗಿ ಈಗ ಅದು ಕಾರ್ಯಗತಗೊಂಡಿದೆ ಎಂದು ತಿಳಿಸಿದರು.

ರಕ್ಷಣಾ ಉಪಕರಣ ಮತ್ತು ತಂತ್ರಜ್ಞಾನ ವರ್ಗಾವಣೆ ಕುರಿತು ಜಪಾನ್ ನಡೆಸಿರುವ ಮೂರು ತತ್ವಗಳ ಪರಿಶೀಲನೆಯನ್ನು ಭಾರತ ಸ್ವಾಗತಿಸಿದೆ.

****************

ರಾಷ್ಟ್ರೀಯ ಭದ್ರತಾ ಸಲಹಗಾರ ಅಜಿತ್ ದೋವಲ್ ಅವರು ನವದೆಹಲಿಯಲ್ಲಿಂದು ಯುನೈಟೆಡ್ ಕಿಂಗ್‌ಡಮ್‌ನ ಭದ್ರತಾ ಸಲಹೆಗಾರ ಜೊನಾಥನ್ ಪಾವೆಲ್ ಅವರೊಂದಿಗೆ ವಾರ್ಷಿಕ ಕಾರ್ಯತಂತ್ರ ಮಾತುಕತೆ ನಡೆಸಿದರು.

ಭಾರತ - ಯುನೈಟೆಡ್ ಕಿಂಗ್‌ಡಮ್ ನಡುವೆ ವ್ಯೂಹಾತ್ಮಕ ಸಹಭಾಗಿತ್ವ, ರಕ್ಷಣಾ ಮತ್ತು ಭದ್ರತಾ ಸಹಕಾರ ಸೇರಿದಂತೆ ವ್ಯಾಪಕ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು ಎಂದು ವಿದೇಶಾಂಗ ವ್ಯವಹಾರದ ಸಚಿವಾಲಯದ ವಕ್ತಾರರು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

****************

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಉಂಟಾದ ಪರಿಸ್ಥಿತಿ ಹಿನ್ನೆಲೆಯಲ್ಲಿ ನಾಗರಿಕರಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ ಖಾತರಿಪಡಿಸಲು ಬದ್ಧವಾಗಿರುವುದಾಗಿ ಸರ್ಕಾರ ಸ್ಪಷ್ಟಪಡಿಸಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಕಾರ್ಯದರ್ಶಿ ಸುಜಾತಾ ಶರ್ಮಾ ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿ, ದೇಶಾದ್ಯಂತ ಗೃಹ ಬಳಕೆ ಎಲ್‌ಪಿಜಿ ಪೂರೈಕೆ ಸಹಜವಾಗಿದೆ. ನಿನ್ನೆ ೧೨ ಲಕ್ಷಕ್ಕೂ ಅಧಿಕ ಗೃಹ ಬಳಕೆದಾರರಿಗೆ ಸಿಲಿಂಡರ್ ಪೂರೈಕೆ ಮಾಡಲಾಗಿದೆ. ವಾಣಿಜ್ಯ ಎಲ್‌ಪಿಜಿ ಪೂರೈಕೆಯಲ್ಲಿ ಏಪ್ರಿಲ್ ತಿಂಗಳಲ್ಲಿ ಇದುವರೆಗೆ ೧ ಲಕ್ಷ ೪೦ ಸಾವಿರ ಟನ್ ಎಲ್‌ಪಿಜಿ ಮಾರಾಟಮಾಡಲಾಗಿದೆ ಎಂದು ಅವರು ತಿಳಿಸಿದರು.

ತೈಲ ಮಾರುಕಟ್ಟೆ ಕಂಪನಿಗಳು ನಡೆಸಿದ ಶಿಬಿರಗಳ ಮೂಲಕ ಐದು ಕೆ.ಜಿ ತೂಕದ ೧ ಲಕ್ಷ ೨೭ ಸಾವಿರ ಸಿಲಿಂಡರ್‌ಗಳನ್ನು ಮಾರಾಟ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಬಂದರು, ಶಿಪಿಂಗ್ ಮತ್ತು ಜಲಮಾರ್ಗ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮುಕೇಶ್ ಮಂಗಲ್ ಮಾತನಾಡಿ, ಡಿಜಿ ಶಿಪಿಂಗ್ ನಿಯಂತ್ರಣ ಕೊಠಡಿ ಇದುವರೆಗೆ ೭ ಸಾವಿರದ ೪೦೦ಕ್ಕೂ ಅಧಿಕ ಕರೆಗಳನ್ನು ನಿರ್ವಹಿಸಿದೆ ಎಂದು ತಿಳಿಸಿದರು.

****************

ಮುಂಬೈನ ವಾಂಖೇಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಪಿಎಲ್ ಟಿ-೨೦ ಕ್ರಿಕೆಟ್‌ನಲ್ಲಿಂದು ಮುಂಬೈ ಇಂಡಿಯನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಮುಖಾಮುಖಿಯಾಗಿವೆ.

ಟಾಸ್ ಗೆದ್ದಿರುವ ಮುಂಬೈ ಇಂಡಿಯನ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

********ಮುಕ್ತಾಯ********